Acquisition of Land in Yeshwanthpur

292· SRI M.S. KRISHNAN (Malleswaram).—Will the Minister for Revenue be pleased to state.—

(*a*) whether the land by the side of Gopal Talkies, Yeshwantapur has been recommended to be acquired by the Corporation of the City of Bangalore ;

(*b*) if so, the stage at which the matter is pending ;

(*c*) whether any representations have been received that this place be acquired and a Government School be constructed there ;

(*d*) if so, the action the Gavernment has taken in the matter?

SRI N. HUTCHEMASTHY GOWDA (Minister for Revenue).—

(*a*) Yes.

(*b*) Subsequently Government came to know that the land had already been acquired by the K.S.R.T C.

(*c*) The Hon'ble Member has requested Government to acquire and hand over the land to the Corporation of Bangalore City for providing School and Hospital to the residents of Yeshwantapur area.

(*d*) Government directed the Special Deputy Commissioner, Bangalore to initiate acquisition proceedings in favour of the Corporation. But in view of replies to clause (b) the Special Deputy Commissioner was again requested to finalise the acquisition proceedings in favour of K S.R.T.C. and to hand over possession of the said land to K.S.R.T.C.

ಶ್ರೀ ಎಂ.ಎಸ್. ಕೃಷ್ಣನ್.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಕೆ.ಎಸ್.ಆರ್.ಟಿ.ಸಿ.ಯವರು ಆ ಜಮೀನನ್ನು ಆಕ್ವೈರ್ ಮಾಡಿಕೊಂಡಿದ್ದಾರೆಂದು ಹೇಳಿದ್ದೀರಿ. ಅವರು ಯಾವ ತಾರೀಖಿನಲ್ಲಿ ಅಕ್ವೈರ್ ಮಾಡಿಕೊಂಡಿದ್ದಾರೆ ? ನಾವು ಆ ಜಮೀನನ್ನು ಕಾರ್ಪೊರೇಷನ್ನಿಗೆ ವಹಿಸಿಕೊಡಬೇಕೆಂದು ಕೇಳಿದ್ದರೂ ರಾಜ್ಯ ರಸ್ತೆ ಸಾರಿಗೆ ನಿಗಮದವರು ಆಕ್ವೈರ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿರಲು ಕಾರಣವೇನು ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲೇ ಸರ್ವೆ ನಂ. 37, 38, 41, 42ರಲ್ಲಿ 12 ಎಕರೆ ಜಮೀನನ್ನು ರಾಜ್ಯ ರಸ್ತೆ ಸಾರಿಗೆ ನಿಗಮದವರು ಕೇಳಿ 16-3-66ರಲ್ಲಿ ಫೈನಲ್ ನೋಟಿಫಿಕೇಷನ್ ಆಗಿತ್ತು. ಅದಾದ ಮೇಲೆ ಸ್ಪೆಷಲ್ ಡೆಪ್ಯೂಟಿ ಕಮೀಷನರ್‌ರವರು ನ್ಯಳವನ್ನು ಪರಿಶೀಲನೆ ಮಾಡಿದಾಗ ಕೆಲವು ಭಾಗಗಳಲ್ಲಿ ಅನ್ ಅಥರೈಸ್ಡ್ ಆಕ್ಯುಪೈಯರ್ಸ್ ಗುಡಿಸಲುಗಳನ್ನು ಕಟ್ಟಿಕೊಂಡಿದ್ದರು. ಅದಕ್ಕೋಸ್ಕರ 9 ಎಕರೆ 18 ಗುಂಟೆ ಜಮೀನನ್ನು ಮಾತ್ರ ಫೈನಲೈಸ್ ಮಾಡಿಕೊಟ್ಟಿದ್ದಾರೆ. ಅದನ್ನು ಫೈನಲ್ ನೋಟಿಫಿಕೇಷನ್ ಮಾಡಿ ಅವರ ಸ್ವಾಧೀನಕ್ಕೆ ಕೊಟ್ಟಿದ್ದಾರೆ. ಉಳಿದ ಸ್ವಲ್ಪ ಭಾಗ ಮಾತ್ರ ಸರ್ಕಾರದ ಪಹಣಿಯಲ್ಲಿದೆ. ಅದಕ್ಕೆ 1,76.622 ರೂಪಾಯಿನ ಅವಾರ್ಡ್ ಕೂಡ ಪಾಸಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ನಮಗೆ ಗೊತ್ತಿರುವ ಹಾಗೆ ಗೊರುಗುಂಟೆ ಪಾಳ್ಯದಲ್ಲಿ ಟ್ರಸ್ಟ್ ಬೋರ್ಡ್ ಜಾಗವೂ ಇದೆ; ಕೆ.ಎಸ್.ಆರ್.ಟಿ.ಸಿ. ಜಾಗವೂ ಇದೆ. ನಮ್ಮ ಬಸ್ಸುಗಳು ಅಲ್ಲಿಯತನಕ ಓಡಾಡುತ್ತಿವೆ ಅಲ್ಲಿ ಸ್ಕೂಲುಗಳು ಇಲ್ಲದೇ ಇರುವುದರಿಂದ ಸಂಬಂಧಪಟ್ಟ ಜಮೀನಿನ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಸೆಟ್ಲ್‌ಮೆಂಟ್ ಆಫೀಸರ್‌ರವರಿಗೆ ಕೊಟ್ಟಿರುವ ಆದೇಶವನ್ನು ವಾಪಸು ತೆಗೆದು ಕೊಂಡು ಸ್ಕೂಲಿಗೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

1-30 P.M

ಶ್ರೀ ಎನ್. ಹುಚ್ಚಮಾಸ್ತಿಗೌಡ —ಇದು ಸರ್ಕಾರ ಕರ್ನಾಟಕ ಸಾರಿಗೆ ಸಂಸ್ಥೆಗಾಗಿ ಆಕ್ಕ್ವೈರ್ ಮಾಡಿರುವ ಜಮೀನು. ಸಾರಿಗೆ ಸಂಸ್ಥೆಯವರು ಬೇರೆ ಕಡೆ ಕೇಳಿದರೆ ಸಾಧ್ಯವೇ ಹೊರತು, ಇದನ್ನು ಕೊಡುವುದಕ್ಕಾಗುವುದಿಲ್ಲ. ಆದರೂ ಮಾನ್ಯ ಸದಸ್ಯರು ಇದರ ಅವಶ್ಯಕತೆ ಬಗ್ಗೆ ಹೇಳುವುದರಿಂದ ನನ್ನ ಅಭಿಪ್ರಾಯವನ್ನು ಸಾರಿಗೆ ಸಂಸ್ಥೆಯವರಿಗೆ ಬರೆದು ತಿಳಿಸಿ, ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವೇ ಎಂದು ತಿಳಿಸುತ್ತೇನೆ; ಅವರು ಒಪ್ಪಿಕೊಂಡರೆ ನನ್ನ ಅಡ್ಡಿ ಏನೂ ಇಲ್ಲ.

ಶ್ರೀ ಎಂ ಎಸ್ ಕೃಷ್ಣನ್ —ಒಂದು ಸಂತೋಷ ಅವರು ತಿಳಿಸುತ್ತೇನೆ ಎಂದು ಹೇಳಿದ್ದಾರೆ. ಅದರ ಜೊತೆಯಲ್ಲಿ ಅಜಮಾಯಿಷಿ ಮಾಡಿದರೆ ಒಳ್ಳೆಯದು ಏಕೆಂದರೆ ಆ ಜಮೀನು ಬಸ್ ನಿರ್ವಾಣಕ್ಕೆ ಉಪಯೋಗವಾಗುವುದಿಲ್ಲ ಬಿ.ಡಿ.ಎ. ಕೊಟ್ಟಿರುವ ಜಮೀನು ಇದೆ ; ಆದುದರಿಂದ ಇದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರ ಸಲಹೆ ಪ್ರಕಾರ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಮತ್ತು ಥೇರ್ಮನ್‌ರವರಿಗೆ ತಿಳಿಸಿ ಸ್ಥಳ ಅಜಮಾಯಿಸಿ ಮಾಡಿ ಕೂಡಲೇ ತಿಳಿಸುತ್ತೇನೆ.

Shifting of Central Jail

330. SRI T.R. SHAMANNA (Fort).—Will the Chief Minister be pleased to state.—

(*a*) whether there is any proposal to shift the Central Jail from the present placee ;

(*b*) if so, when and where it will be shifted ?

SRI D. DEVARAJ URS (Chief Minister).—

(*a*) Yes.

(*b*) The matter is being examined further.

ಶ್ರೀ ಟಿ. ಆರ್. ಶಾಮಣ್ಣ,— ಸೆಂಟ್ರಲ್ ಜೈಲ್ ಕಟ್ಟಿಸಿದಾಗ ಅದು ಬೆಂಗಳೂರಿನಿಂದ ಹೊರಗಡೆ ಇತ್ತು, ಇವತ್ತು ಅದು ಮಧ್ಯ ಇರುವುದರಿಂದ ಅವಘಡ ಜಾಗ್ರತೆ ಹೊರಗೆ ಕಳುಹಿಸುವುದು ಸೂಕ್ತ ಅಲ್ಲವೇ ?

† ಶ್ರೀ ಡಿ. ದೇವರಾಜ ಅರಸ್ —ಹೌದು ಒಪ್ಪಿಕೊಳ್ಳುತ್ತೇನೆ ಸೂಕ್ತ.

ಶ್ರೀ ಟಿ. ಆರ್. ಶಾಮಣ್ಣ.— ಹಿಂದೆ ಸರ್ಕಾರದವರು ತೆರೆದ ಬಂದೀಖಾನೆಗಳನ್ನು ಮಾಡಿದ್ದಾರೆ. ಈಗಲೂ ಮಾಡುವುದಕ್ಕೆ ಸಾಧ್ಯವೇ ?

SRI D. DEVARAJ URS.— Open jail is a big experiment. So far as shifting the Central Jail concerned, there is necessity to shift it, we accept it.